ದಿನಾಂಕ 19.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಕೆ.ಪಿ.ಬಿ ವಕೀಲರಿಂದಃ-**

ದಾವೆಯನ್ನು ಸರ್ವೆ ನಂ. 69, ಸರ್ವೆ ನಂ. 20/1, ಸರ್ವೆ ನಂ. 68, ಸರ್ವೆ ನಂ.1/1, ಸರ್ವೆ ನಂ. 20/4 ಸ್ವತ್ತುಗಳಿಗೆ ಸಂಬಂಧಿಸಿದಂತೆ ಹೂಡಲಾಗಿದೆ. ಸದರಿ ಸ್ವತ್ತುಗಳನ್ನು ಅಯ್ಯಮಾಡ ಸೋಮಯ್ಯ, ಸೋಮೇಶ ಮತ್ತು ಬಿದ್ದಪ್ಪರವರುಗಳಿಂದ ನನ್ನ ತಂದೆ ಮತ್ತು ತಾಯಿ ಖರೀದಿಸಿದ್ದರು. ನಾನು ನ್ಯಾಯಾಲಯಕ್ಕೆ ಹಾಜರಾದ ಬಳಿಕ 1 ನೇ ಪ್ರತಿವಾದಿಯನ್ನು ನೋಡಿರುತ್ತೇನೆ. 1 ನೇ ಪ್ರತಿವಾದಿಯ ತಂದೆ ನನಗೆ ಪರಿಚಯವಿರುವುದಿಲ್ಲ. ನಾನು ಮೇಲೆ ತಿಳಿಸಿದ ಸರ್ವೆ ನಂಬರ್ ಗಳ ಸ್ವತ್ತುಗಳು ಒಂದೇ ಸ್ಥಳದಲ್ಲಿ ಇವೆ. ನಾವು ಸದರಿ ಸ್ವತ್ತುಗಳನ್ನು 1995 ರಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ.

ಸರ್ವೆ ನಂ. 1/1 ಮತ್ತು ಸರ್ವೆ ನಂ. 68 ಪೈಸಾರಿ ಜಾಗವಾಗಿದ್ದು, ಅದರ ಪಹಣಿಯು ಸರ್ಕಾರದ

ಹೆಸರಿನಲ್ಲಿ ಇವೆ. ಸರ್ವೆ ನಂ. 1/1 ರ ಜಮೀನನ್ನು ಸರ್ಕಾರದ ಪರವಾಗಿ ವಿರಾಜಪೇಟೆಯ ತಹಶೀಲ್ದಾರ್ ರವರು ಹಲವಾರು ಜನರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂ. 1/71 ರ ವಿಸ್ತೀರ್ಣ 10 ಎಕರೆ ಸ್ವತ್ತಿನ ಪಹಣಿಯು 1ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಅದಕ್ಕೂ ಮೊದಲು ಅವರ ತಂದೆಯ ಹೆಸರಿನಲ್ಲಿ ಪಹಣಿ ಇತ್ತು ಎಂದರೆ ಸರಿ. ಪಹಣಿಯ ಪ್ರಕಾರ 1ನೇ ಪ್ರತಿವಾದಿಯ ತಂದೆ ಸದರಿ ಸ್ವತ್ತಿನ ಮೇಲೆ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ಸರಿ. ಕಾಫಿ ಬೆಳೆ ಇರುವ ಬಗ್ಗೆ ಪಹಣಿಯಲ್ಲಿ ನಮೂದು ಇದೆ ಎಂದರೆ ಸರಿ.

ನಾವು ಸರ್ವೆ ನಂ. 1/1 ರಲ್ಲಿ ಸುಮಾರು 12 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದೇವೆ. ಸರ್ವೆ ನಂ. 68 ರಲ್ಲಿ ಅಂದಾಜು 4-5 ಎಕರೆ ಜಮೀನು ನಮ್ಮ ಸ್ವಾಧೀನದಲ್ಲಿ ಇದೆ. ಸರ್ವೆ ನಂ. 1/1 ಮತ್ತು ಸರ್ವೆ ನಂ. 68 ಒಂದಕ್ಕೊಂದು ಲಗತ್ತಾಗಿರುವ ಸ್ವತ್ತುಗಳು ಎಂದರೆ ಸರಿ. ಸರ್ವೆ ನಂ. 1/1 ರಲ್ಲಿ ಎಷ್ಟು ಉಪ ನಂಬರ್ ಗಳು

ವಿಂಗಡಣೆ ಆಗಿವೆ ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂ. 1/1 ಮತ್ತು ಸರ್ವೆ ನಂ. 68 ರ ಜಮೀನುಗಳ ಪೈಕಿ ನಮಗೆ ಯಾವುದೇ ಜಮೀನು ಸರ್ಕಾರದಿಂದ ಮಂಜೂರು ಆಗಿರುವುದಿಲ್ಲ.

ಪ್ರತಿವಾದಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಎದುರು ಕ್ಲೈಮ್ ಸ್ವತ್ತು 1 ನೇ ಪ್ರತಿವಾದಿಯ ತಂದೆಗೆ 1972 ರಲ್ಲಿ ಕೊಡಗು ಜಿಲ್ಲಾಧಿಕಾರಿಯವರು ಮಂಜೂರು ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಪತ್ರವನ್ನು ಓದಿದ ಬಳಿಕ, ಸದರಿ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ಮಂಜೂರಾತಿಯ ಪ್ರಕಾರ ಮಂಜೂರಾದ ಜಾಗವನ್ನು ಅಳತೆ ಮಾಡಿ, ನಕ್ಷೆ ತಯಾರಿಸಿ, 1981 ರಲ್ಲಿ ಸಾಗುವಳಿ ಚೀಟಿಯನ್ನು ನೀಡಿರುತ್ತಾರೆ ಎಂದರ ನನಗೆ ಗೊತ್ತಿಲ್ಲ. ಸಾಗುವಳಿ ಚೀಟಿಯನ್ನು ನೀಡಿದ ಬಳಿಕ, 10 ಎಕರೆ ಜಾಗದಲ್ಲಿ ಕಾಫಿ ಕೃಷಿ ಮಾಡಿ, ಸಿ.ಆರ್.ಸಿ ಪ್ರಮಾಣಪತ್ರವನ್ನು ತಹಶೀಲ್ದಾರ್ ರವರಿಂದ ಪಡೆದುಕೊಂಡು ಸ್ವಾಧೀನದಲ್ಲಿ ಅವರ ಜೀವಿತಾವಧಿಯವರೆಗೂ

ಇದ್ದರು ಎಂದರೆ ಸರಿಯಲ್ಲ. ಅವರು ಮೃತರಾದ ಬಳಿಕ, 1 ನೇ ಪ್ರತಿವಾದಿಯು ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಸರ್ವೆ ನಂ. 1/71 ರ 10 ಎಕರೆ ಸ್ವತ್ತಿನ ಮೇಲೆ ನನಗೆ ಹಕ್ಕು ಇರುವುದಿಲ್ಲ. ಸದರಿ ಜಮೀನು 1 ನೇ ಪ್ರತಿವಾದಿಗೆ ಸೇರಬೇಕು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 1/1, ಸರ್ವೆ ನಂ. 20/1, ಸರ್ವೆ ನಂ. 69 ಮತ್ತು ಸರ್ವೆ ನಂ. 68 ಒಂದಕ್ಕೊಂದು ಲಗತ್ತಾಗಿ ಇರುವ ಆಸ್ತಿಗಳು. ಸರ್ವೆ ನಂ. 1/71 ನಮ್ಮ ಸ್ವಾಧೀನದಲ್ಲಿ ಇರುವ ಸರ್ವೆ ನಂ. 68 ರ ಜಮೀನಿಗೆ ಹೊಂದಿಕೊಂಡಂತೆ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯು ಜೀವಂತವಾಗಿ ಇರುವಾಗ ದಾವಾಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದರು. ನಾನು ಆಗಾಗ್ಗೆ ದಾವಾಸ್ವತ್ತುಗಳ ಬಳಿ ಹೋಗಿ ಬರುತ್ತಿದ್ದೆನು.

ದಿನಾಂಕ 01.10.2022 ರಂದು ನನ್ನ ತಂದೆ ಮೃತರಾಗಿರುತ್ತಾರೆ. ಈ ದಾವೆಯನ್ನು ದಾಖಲಿಸುವುದಕ್ಕಿಂತ ಪೂರ್ವದಲ್ಲಿ ಪ್ರತಿವಾದಿಗಳು

ನನಗೆ ಪರಿಚಯವಿರಲಿಲ್ಲ. ಅವರನ್ನು ನಾನು ಎಲ್ಲಿಯೂ ಸಹಾ ನೋಡಿರಲಿಲ್ಲ. ಈ ದಾವೆಯನ್ನು ನನ್ನ ತಂದೆಯವರು ದಾಖಲಿಸುವುದಕ್ಕಿಂತ ಮೊದಲು ಪ್ರತಿವಾದಿಗಳು ನಮಗೆ ಪರಿಚಯವಿರಲಿಲ್ಲ ಹಾಗೂ ಅವರಿಂದ ನಮಗೆ ಯಾವುದೇ ತೊಂದರೆ ಇರಲಿಲ್ಲ. ನನ್ನ ತಂದೆಯವರು ಪ್ರತಿವಾದಿಗಳ ಬಗ್ಗೆ ನಮಗೆ ಯಾವುದೇ ವಿಷಯ ಹೇಳಿರುವುದಿಲ್ಲ. ಪ್ರತಿವಾದಿಗಳು ನಮ್ಮ ಆಸ್ತಿಗಳ ಬಳಿ ಬಂದಿರುವುದಿಲ್ಲ. ನಾವು ಪೈಸಾರಿ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುವುದರಿಂದ, ಸದರಿ ಜಾಗವು ಸರ್ವೆ ನಂ. **1/71** ಕ್ಕೆ ಸೇರಿರುವುದರಿಂದ ನಮಗೆ ಅದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಮೃತರಾದ ಬಳಿಕ, ನಾವು ದಾವಾಸ್ವತ್ತುಗಳ ಸ್ವಾಧೀನಾನುಭವದಲ್ಲಿ ಇದ್ದು, ಪ್ರತಿವಾದಿಗಳು ನಮ್ಮ ಸ್ವಾಧೀನಾನುಭವಕ್ಕೆ ತೊಂದರೆ ನೀಡಿರುವುದಿಲ್ಲ.

ದಾವಾಸ್ವತ್ತುಗಳು ತಮಗೆ ಸೇರಿದ ಸ್ವತ್ತುಗಳು ಎಂದು ಪ್ರತಿವಾದಿಗಳು ನಮ್ಮ ಬಳಿ ಬಂದು ಹೇಳಿರುವುದಿಲ್ಲ. ನಾವು ಮತ್ತು ನಮ್ಮ ತಂದೆಯವರು ಅನೋನ್ಯವಾಗಿ ಇದ್ದೆವು. ನನ್ನ ತಂದೆಯು ದಾವೆಯನ್ನು ದಾಖಲಿಸಿದ ಬಳಿಕ, ನಾವು 1 ನೇ ಪ್ರತಿವಾದಿಯನ್ನು ಎದುರು ಕ್ಲೇಮ್ ಸ್ವತ್ತಿನಿಂದ ಹೊರಹಾಕಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ. 20/1 ರ ಪೂರ್ವಕ್ಕೆ ಸರ್ವೆ ನಂ. 68/1 ಮತ್ತು ಸರ್ವೆ ನಂ. 1/1 ರ ಜಮೀನುಗಳು ಇವೆ. ಪಶ್ಚಿಮಕ್ಕೆ ಸರ್ವೆ ನಂ. 1/1 ರ ಪೈಸಾರಿ ಜಮೀನು. ಉತ್ತರಕ್ಕೆ ದೀಪಕ್ ರವರ ಜಮೀನು ಮತ್ತು ದಕ್ಷಿಣಕ್ಕೆ ಶ್ರೀಕಾಂತ್ ರವರ ಜಮೀನು ಇದೆ. ಸರ್ವೆ ನಂ. 69 ರ ಪೂರ್ವಕ್ಕೆ ಸರ್ವೆ ನಂ. 68 ಮತ್ತು ಸರ್ವೆ ನಂ. 1/1 ರ ಪೈಸಾರಿ ಜಾಗ, ಪಶ್ಚಿಮಕ್ಕೆ ಸರ್ವೆ ನಂ. 20/1 ರ ಜಮೀನು, ಉತ್ತರಕ್ಕೆ ದೀಪಕ್ ರವರ ಜಮೀನು ಮತ್ತು ದಕ್ಷಿಣಕ್ಕೆ ಶ್ರೀಕಾಂತ್ ರವರಿಗೆ ಸೇರಿದ ಸ್ವಂತ ಜಮೀನು ಮತ್ತು ಪೈಸಾರಿ ಜಾಗ ಇದೆ. ಬೀರುಗ ಗ್ರಾಮದಲ್ಲಿ ದಾವಾಸ್ವತ್ತುಗಳನ್ನು ಹೊರತು ಪಡಿಸಿ ನಮಗೆ ಇತರೆ ಆಸ್ತಿಗಳು ಇರುವುದಿಲ್ಲ.

1 ಮತ್ತು 2 ನೇ ಪ್ರತಿವಾದಿಗಳು ಮೈಸೂರಿನಲ್ಲಿ ನೆಲೆಸಿದ್ದಾರೆ ಎಂದರೆ ಸರಿ. ಅವರು ತಮ್ಮ ಆಸ್ತಿಯ ಬಳಿ ಒಂದು ತಿಂಗಳು ಅಥವಾ ಎರಡು ತಿಂಗಳಿಗೊಮ್ಮೆ ಬಂದ ಹೋಗುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನಮ್ಮ ತಂದೆಯ ಜೀವಿತಾವಧಿಯಲ್ಲಿ ದಾವಾಸ್ವತ್ತುಗಳ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಿಲ್ಲದೇ ಇದ್ದರೂ ಸಹಾ ಎದುರು ಕ್ಲೇಮ್ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಆದುದ್ದರಿಂದ ನಾವು ಈ ದಾವೆಯಲ್ಲಿ ಕೋರಿರುವಂತಹ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.